ಅಸಲು ದಾವಾ ನಂ.252/2015

ಡಿ.ಡಬ್ಲ್ಯೂ-7.

**ಸಾಕ್ಷಿಯನ್ನು ಇಂದು ದಿನಾಂಕಃ 24.11.2023 ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ-ಪ್ರತಿವಾದಿ ಪರ ಎಂ.ವಿ.ಇ. ವಕೀಲರಿಂದ**

ನನ್ನ ಹೆಸರು ಅಂಬಾರಾಯ ತಂದೆ ಶರಣಪ್ಪ ಘೇರ ಇರುವುದಿಲ್ಲ ಎಂದರೆ ಸರಿ.ನನ್ನ ಹೆಸರು ಅಂಬಾರಾಯ ಶರಣಪ್ಪ ಘೇರ ಎಂದು ಹೇಳಿರುವುದಿಲ್ಲ ಎಂದರೆ ಸರಿ. ನನಗೆ ಆಂಗ್ಲ ಭಾಷೆ ಓದಲು ಬರೆಯಲು ಬರುವುದಿಲ್ಲ ಎಂದರೆ ಸರಿ. ನನ್ನ ಪ್ರಮಾಣ ಪತ್ರದ ಅಂಶಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ಪ್ರಮಾಣ ಪತ್ರದ ಅಂಶಗಳಲ್ಲಿ ನಮ್ಮ ವಕೀಲರಿಗೆ 2 ನೇ ಪ್ರತಿವಾದಿ ಹೇಳಿ ಬರೆಯಿಸಿರುತ್ತಾನೆ ಎಂದರೆ ಸರಿ. ಸದರಿ ವ್ಯವಹಾರ ನನ್ನ ಸಮಕ್ಷಮ ಆಗಿರುವುದಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಒಂದು ಜಮೀನು ಅಥವಾ ಮಾುರಕಟ್ಟೆ ಮೌಲ್ಯವನ್ನು ಸಬ ರಜಿಸ್ಟಾರ ಕಚೇರಿಯವರು ತಿಳಿಸಿರುತ್ತಾರೆ ಎಂದರೆ ಸರಿ. ಖರೀದಿ ಮಾಡುವಾಗ ಮಾರುಕಟ್ಟೆ ಬೆಲೆಗೆ ತೆರಿಗೆ ತುಂಬಿ ನೊಂದಣಿ ಮಾಡಿಸಿಕೊಳ್ಳಬೇಕಾಗುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಮಾರಾಟ ಮಾಡಬೇಕಾದರೆ ನೊಂದಾಯಿತ ಪತ್ರದ ಮುಖಾಂತರ ಮಾಡಬೇಕಾಗುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಹಕ್ಕು ಬದಲಾವಣೆ ಮಾಡುವಾಗ ನೋಟಿಸ್ಸು ನೀಡಿ ಹಕ್ಕು ಬದಲಾವಣೆ ಮಾಡುತ್ತಾರೆ ಎಂದರೆ ಸರಿ. ದಾವಾ ಆಸ್ತಿ ವಾದಿಯವರ ಹಿರಿಯರ ಅಸ್ತಿ ಎಂದರೆ ಸಾಕ್ಷಿ ವಾದಿಯವರ ಕಾಕರವರ ಆಸ್ತಿ ಎಂದು ಹೇಳುತ್ತಾರೆ. ವಾದಿಯ ಕಾಕಾನ ಹೆಸರಿನಲ್ಲಿ ದಾಖಲೆಗಳು ನೋಡಿರುತ್ತೀರಾ ಎಂದರೆ ಸಾಕ್ಷಿ ಅವರ ಕಾಕಾನ ಹೆಸರು ಬೇರೆ ಸರ್ವೆ ನಂಬರನಲ್ಲಿ ಇರುತ್ತದೆ ಇದರಲ್ಲಿ ಇರುವುದಿಲ್ಲ ಎಂದು ಹೇಳುತ್ತಾರೆ. 1978 ರಿಂದ ವಾದಿಯ ಹೆಸರು ಪಹಣಿ ಪತ್ರಿಕೆಯಲ್ಲಿ ಬರುತ್ತೀವೆ ಎಂದರೆ ಸರಿ. 2 ನೇ ಪ್ರತಿವಾದಿ ಕಡಗಂಚಿಯವನು ಎಂದರೆ ಸರಿ. 2 ನೇ ಪ್ರತಿವಾದಿ ವಾದಿಯ ಮನೆಯ ಖಳದ ಹೊಲ್ಯಾ ಅಲ್ಲ ಎಂದರೆ ಸಾಕ್ಷಿ 2 ನೇ ಪ್ರತಿವಾದಿ ಅವರ ಮನೆಯಲ್ಲಿ ದುಡಿಯುತ್ತಿದ್ದ ಎಂದು ಹೇಳುತ್ತಾರೆ. ದಾವಾ ಆಸ್ತಿಯ ಬಗ್ಗೆ ವ್ಯವಹಾರ ಆದ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ. ಪ್ರಮಾಣ ಪತ್ರದಲ್ಲಿನ ಅಂಶಗಳು 2 ನೇ ಪ್ರತಿವಾದಿ ಬರೆಯಿಸಿರುತ್ತಾರೆ ಎಂದರೆ ಸಾಕ್ಷಿ ಯಾರು ಬರೆಯಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.ಇಂದಿಗೂ ಸಹ ದಾವಾ ಆಸ್ತಿಯ ಮಾಲೀಕ ಹಾಗೂ ಕಬ್ಜೆದಾರ ವಾದಿ ಇರುತ್ತಾನೆ ಎಂದರೆ ಸರಿಯಲ್ಲ. ನನಗೆ ಸಾಕ್ಷಿ ಹೇಳಲು 2 ನೇ ಪ್ರತಿವಾದಿ ಕರೆದುಕೊಂಡು ಬಂದಿರುತ್ತಾನೆ ಎಂದರೆ ಸಾಕ್ಷಿ ನನಗೆ ನೋಟಿಸ್ಸು ಬಂದ ಕಾರಣ ನಾನು ಬಂದಿರುತ್ತೇನೆ ಎಂದು ಹೇಳುತ್ತಾನೆ. ನೋಟಿಸ್ಸು ಯಾವಾಗ, ಏನೆಂದು, ಯಾರಿಂದ ಬಂದಿದೆ ಎಂದು ನನಗೆ ಹೇಳಲು ಆಗುವುದಿಲ್ಲ. ದಾವಾ ಆಸ್ತಿ ಆಳಂದ ಕಲಬುರಗಿ ರಸ್ತೆಗೆ ಅಂಟಿಕೊಂಡಿರುತ್ತದೆ ಎಂದರೆ ಸರಿ. ದಾವಾ ಆಸ್ತಿಯ ಈಗಿನ ಬೆಲೆ ಸಾಮಾನ್ಯವಾಗಿ 4-5 ಲಕ್ಷ ಇರಬಹುದು. ದಾವಾ ಆಸ್ತಿ 2 ನೇ ಪ್ರತಿವಾದಿಗೆ ನೀಡಬೇಕು ಎಂದು ನಾನು ಹೇಳಿರುವುದಿಲ್ಲ ಎಂದರೆ ಸರಿ. 1999 ರಲ್ಲಿ ವಾದಿ ಹಾಗೂ ಪ್ರತಿವಾದಿಯ ತಂದೆ ಮತ್ತು ಚಿಕ್ಕಪ್ಪ 2 ನೇ ಪ್ರತಿವಾದಿಗೆ 2 ಎಕರೆ 30 ಗುಂಟೆ ಮಾರಾಟ ಮಾಡಿ ನೊಂದಣಿ ಮಾಡಿರುವುದನ್ನು ನಾನು ನೋಡಿರುತ್ತೇನೆ. ಜಮೀನು ಖರೀದಿ ಮಾಡಿದರೆ ನೊಂದಣಿ ಮಾಡಬೇಕು ಎಂಬ ವಿಷಯ 2 ನೇ ಪ್ರತಿವಾದಿಗೆ ಗೊತ್ತು ಎಂದರೆ ಸರಿ. ನನ್ನ ಪ್ರಮಾಣ

ಪತ್ರದಲ್ಲಿನ ಅಂಶಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ಸುಳು ಇರುತ್ತವೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲಿಸಿ ಸುಳ್ಳು ಸಾಕ್ಷ್ಯ ಹೇಳುತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

**ಓ.ಹೇ.ಕೆ.ಸರಿ.ಇದೆ.**

ಅಪರ ಸಿವಿಲ್ ನ್ಯಾಯಾಧೀಶರು
**ಆಳಂದ.**